

## ಪೇಪರ್ ಮೋಟಾರ್ ಬೈಕ್ ಕಂಡೀರಾ?

‘ಕಸದಿಂದ ರಸ’ ಅನ್ನೋ ಮಾತಿಗೆ ಅನ್ವರ್ಥವಾಗುವಂತೆ ಮಂಗಳೂರು ಮೂಲದ, ಬೆಂಗಳೂರು ನಿವಾಸಿಯಾದ ವೈಷ್ಣವಿ ಶೆಣೈ ಪೇಪರ್ ಕ್ವಿಲ್ಲಿಂಗ್ ಕಲೆಯಲ್ಲಿ ತೊಡಗಿಕೊಂಡಿದ್ದಾರೆ. ಇವರು ಪೇಪರ್, ಜೇಡಿಮಣ್ಣಿನಿಂದ ಅನೇಕ ವಸ್ತುಗಳನ್ನು ನಿರ್ಮಿಸಿದ್ದು, ಅವು ನೋಡುಗರ ಗಮನಸೆಳೆಯುತ್ತಿವೆ.


ಇವರು, ಪೇಪರ್‌ನಿಂದ ತಯಾರಿಸಿದ ಗೊಂಬೆ ಹಾಗೂ ಮರಿ ಜೇರುಂಡೆ ನೋಡಲು ಆಕರ್ಷಕವಾಗಿವೆ. ಅದೇ ರೀತಿ ಇವರ ಕೈಚಳಕದಿಂದ ಮೂಡಿದ ‘ಪೇಪರ್ ಮೋಟಾರ್ ಬೈಕ್’ ವೈಷ್ಣವಿ ಕಲಾ ನೈಪುಣ್ಯಕ್ಕೆ ಸಾಕ್ಷಿಯಾಗಿದೆ. ಅದರಂತೆ ರೇಷ್ಮೆದಾರ ಬಳಸಿ ಮಾಡಿರುವ ಕಿವಿಯ ಆಭರಣಗಳು ಅತ್ಯಾಕರ್ಷಕವಾಗಿವೆ. ಸಾಮಾನ್ಯವಾಗಿ ಐಸ್ ಕ್ರೀಮ್ ಕಡ್ಡಿಗಳನ್ನು ಬಳಸಿದ ಮೇಲೆ ಡಸ್ಟ್‌ಬಿನ್‌ಗೆ ಹಾಕುತ್ತೇವೆ. ಆದರೆ ಇವರು ಕಡ್ಡಿಗಳಿಗೆ ಪೇಂಟ್ ಬಳಸಿ ಬುಕ್ ಮಾರ್ಕ್ ರೀತಿ ಉಪಯೋಗಿಸುವ ಮೂಲಕ ಸೃಜನಶೀಲತೆಯಲ್ಲಿ ತೊಡಗಿಕೊಂಡಿದ್ದಾರೆ.

—ಟಿ.ಎಸ್. ಪ್ರತಿಭಾ, ಚಿತ್ರದುರ್ಗ









## ‘ನಂಜುಂಡ’ನ ಸನ್ನಿಧಿಯಲ್ಲಿ ರಾವಣ

ನಂಜನಗೂಡಿನ ನಂಜುಂಡೇಶ್ವರ ದೇವಸ್ಥಾನವು ಶಿವನಿಗೆ ಅರ್ಪಿತವಾದ ಹಿಂದೂ ದೇವಾಲಯ. ಈ ದೇವಾಲಯವು ಕ್ರಿ.ಶ. 9ನೇ ಶತಮಾನದಲ್ಲಿ ಗಂಗ ವಂಶಸ್ಥರಿಂದ ನಿರ್ಮಿಸಲಾಯಿತು ಎನ್ನುವುದು ಐತಿಹ್ಯ. ತದನಂತರ 12ನೇ ಶತಮಾನದಲ್ಲಿ ಹೊಯ್ಸಳರು ಇದನ್ನು ಇನ್ನಷ್ಟು ಅಭಿವೃದ್ಧಿಗೊಳಿಸಿದರು. ಕಾವೇರಿಯ ಉಪನದಿಯಾದ ಕಪಿಲಾ ನದಿಯ ಬಲದಂಡೆಯಲ್ಲಿರುವ ಇದನ್ನು ದಕ್ಷಿಣ ಕಾಶಿಯೆಂದೂ ಕರೆಯುತ್ತಾರೆ.

ಈ ದೇವಾಲಯದ ವಾಸ್ತುಶಿಲ್ಪ ಹಾಗೂ ಐತಿಹಾಸಿಕ ಮಹತ್ವಕ್ಕೆ ಹೆಸರಾಗಿದೆ. ದೇವಾಲಯದ ಸಂಕೀರ್ಣವು ಕೋಟೆಯಿಂದ ಆವೃತವಾಗಿದ್ದು ಹಲವಾರು ಚೇತೋಹಾರಿ ಕೆತ್ತನೆಗಳನ್ನು ಒಳಗೊಂಡಿದೆ. ಒಂಬತ್ತು ಅಂತಸ್ತಿನ 120 ಅಡಿ ಎತ್ತರದ ದೇವಾಲಯದ ಗೋಪುರ ಮತ್ತು ಅದರ ವಿಸ್ತಾರವಾದ ಹೊರಭಾಗವನ್ನು ಮೈಸೂರು ರಾಜ ಮೂರನೆ ಕೃಷ್ಣರಾಜ ಒಡೆಯರು, ರಾಣಿ ದೇವರಾಜಮ್ಮಣ್ಣಿಯವರು ನಿರ್ಮಿಸಿದ್ದಾರೆ ಎನ್ನುವುದು ಇತಿಹಾಸ. ದೇವಾಲಯದ ಸಂಕೀರ್ಣದ ಪ್ರವೇಶದ್ವಾರದಲ್ಲಿನ ಕಂಬದಲ್ಲಿನ ಹತ್ತು ತಲೆಗಳುಳ್ಳ ರಾವಣನ ಈ ಸುಂದರ ಕೆತ್ತನೆ ಕಣ್ಮನ ಸೆಳೆಯಿತು.

—ಎಸ್. ಪ್ರಭಾವತಿ, ಬೆಂಗಳೂರು



## ಠಕ್ಕಾ... ಠಕ್ಕಾ... ‘ಠಿಕ್ಕಾ’ನ ಆತ್ಮಕಥನ!

‘ಅತ್ತೆಗೊಂದು ಕಾಲ, ಸೊಸೆಗೊಂದು ಕಾಲ’ ಎಂಬ ಗಾದೆ ಮಾತು ನನ್ನ ಕಿವಿಗೆ ಬಿದ್ದರೂ ಹೆಚ್ಚು ಗಮನಹರಿಸದ ಅಹಂಕಾರಿ ಆಗಿದ್ದೆ ನಾನು! ಕಾರಣ ಅಂದು ನನ್ನ ಖದರ್ ಹಾಗೆಯೇ ಇತ್ತು. ಈಗ ನನ್ನ ಪರಿಸ್ಥಿತಿಯನ್ನು ಕೇಳುವವರೇ ಇಲ್ಲ. ಯಾಕೆಂದರೆ ನಾನು ಎಲ್ಲರಿಂದಲೂ ಮರೆಯಾಗಿದ್ದೇನೆ. ಅಷ್ಟೇ ಅಲ್ಲ, ನನಗೆ ಜನ್ಮ ನೀಡಿದ ತಾಯಿ ತಂದೆಯವರಿಂದಲೂ. ಜಾತ್ರೆಯಲ್ಲಿ, ಸಂತೆಯಲ್ಲಿ, ಊರಿಂದ ಊರಿಗೆ ‘ಠಕ್ಕಾ... ಠಕ್ಕಾ... ಠಿಕ್ಕಾ...’ ಎನ್ನುತ್ತ ಹೆಗಲ ಮೇಲೆ ಕಳಸದ ಹಾಗೆ ಸಿಂಗರಿಸಿಕೊಂಡು ಹೊತ್ತು ನನ್ನನ್ನು ಮಾರಾಟ ಮಾಡಿಯೇ ಹೊಟ್ಟೆಗೆ ಹಿಟ್ಟನ್ನು ತುಂಬಿಕೊಳ್ಳುತ್ತಿದ್ದ ಮಾರಾಟಗಾರರು ಎಲ್ಲಿ ಹೋದರೋ ಅನ್ನುವುದೂ ಗೊತ್ತಿಲ್ಲ.

ಹತ್ತಾರು ವರ್ಷಗಳ ಹಿಂದೆ ಮಕ್ಕಳ ಪ್ರೀತಿಯ ಆಟಿಕೆಯ ಸಲಕರಣೆ

